ಧರಾ... ಅಲ್ವಾ?" ಎಂದೆ ಬಿರುಸಾಗಿ. ಅವನು ನಸುನಗುತ್ತಾ "ಕೋಪ ಮಾಡ್ಕೋಬೇಡಮ್ಮ. ಸಿಂಪಲ್ ಲಾಜಿಕ್ ಇದು. ಪ್ರಶಾಂತ ಅಂಕಲ್ ಹೇಳಿದಂತೆ ವೀಸಾ ಇಂಟರ್‌ವ್ಯೂನಲ್ಲಿ ಏನು ಉತ್ತರ ಕೊಡಬೇಕೂಂತ ತಪ್ಪು ತಪ್ಪಾಗಿ ಹೇಳ್ಕೊಟ್ಟಿದಾರೆ. ಅದನ್ನ ಯಾರಿಗೂ ಹೇಳ್ಬಾರ್ದೂಂತನೂ ಹೇಳಿದಾರೆ" ಎಂದು ನನ್ನ ಮುಖ ನೋಡಿದ. ನನಗೆಲ್ಲಾ ಗೊಂದಲಮಯವಾಗಿತ್ತು. ಮುಂದುವರೆಸಿದವ "ಅದು ಯಾಕೇಂತ ಕೇಳು... ಪದ್ಮಿನಿ ಆಂಟಿ ಬರೀ ಫ್ಯಾಷನ್, ಸ್ಟೈಲ್ ಮಾಡಕ್ಕಷ್ಟೇ ಸರಿ. ಒಳ್ಳೇ ಅಡಿಗೆ, ಕೆಲಸ ಒಂದೂ ಇಲ್ಲ. ಜೊತೆಗೆ ಪೇಶಂಟ್ ಪತಿ ಬೇರೆ. ಅಲ್ಲಿ ಕೆಲಸದವರು ಸಿಗಲ್ಲ. ಬಾಣಂತನದ ಗತಿ... ದೇವರೇ ಗತಿ. ನೀನಾದ್ರೆ ಚೆನ್ನಾಗಿ ಮೈಮುರ್ದು ದುಡೀತೀಯಾ. 'ನನ್ನ ಮೊಮ್ಮಗು...' ಅಂತ ಖುಷಿಯಿಂದ ಎದ್ದು ಬಿದ್ದು ಬಾಣಂತನ ಮಾಡ್ತೀಯಾ. ಅದಕ್ಕೇ ನಿನ್ನ ಆರಿಸಿದಾರೆ. ಸುಮ್ನೆ ಹೇಳಿಬಿಟ್ರೆ ಪದ್ಮಿನಿ ಆಂಟಿ ಬಿಡ್ತಾರಾ? ಅದಕ್ಕೇ ಅವರ ವೀಸಾ ರಿಜೆಕ್ಟ್ ಆಯ್ತೂಂತ ಮಾಡಿದ್ರು. ಸರೀನಾ..." ಎಂದ ಅಂತರ್‌ಜ್ಞಾನಿಯಂತೆ. ನನ್ನ ತಲೆಯಲ್ಲಿ ನೂರು ವೋಲ್ಟಿನ ಬಲ್ಬು ಈಗ ಬೆಳಗಿತು. ಪದ್ಮಿನಿ ಸುಳ್ಳು ಉತ್ತರ ಕೊಟ್ಟ ಪರಿ ನೆನಪಾಯ್ತು. ತಲೆ ಒಮ್ಮೆ ತಿರುಗಿ ನಿಂತಂತೆ ಭಾಸ. ಸುಮಂತ "ಹ್ಞೂಂ... ಹೊರಡೋಕೆ ಸಿದ್ಧಳಾಗು. ರಾತ್ರಿ ನಿನ್ನ ಮಗನ ಫೋನ್ ಬರುತ್ತೆ" ಎಂದವ "ಜಗವೇ ಸ್ವಾರ್ಥದ ಕಂತೆ..." ಎಂದು ಗುನುಗುನಿಸತೊಡಗಿದ.

ಎರಡು ನಿಮಿಷ ಕಣ್ಮುಚ್ಚಿ ಯೋಚಿಸುತ್ತ ಕುಳಿತವಳು "ಏನು ಯೋಚಿಸ್ತಿದೀಯಮ್ಮಾ?..." ಎಂಬ ಅವನ ಪ್ರಶ್ನೆಗೆ ಕಣ್ಬಿಟ್ಟೆ. ಮುಗುಳ್ನಗುತ್ತ "ಸುಮಂತ.. ಕೆಲವೊಂದು ಸತ್ಯಗಳು, ಸೌಂದರ್ಯ ತೆರೆಯ ಮರೆಯಲ್ಲಿದ್ದರೇನೆ ಚೆನ್ನ. ಹೊರಗೆ ಬಂದರೆ ಅವು ವಿಕಾರವಾಗುತ್ವೆ. ಸಂಬಂಧ ಕೆಡುತ್ತೆ. ಗೀತೆಯಲ್ಲಿ ಶ್ರೀಕೃಷ್ಣ ಹೇಳಿದಂತೆ ಫಲಾಫಲಗಳ ಅಪೇಕ್ಷೆಯಿಲ್ಲದೇ ನಮ್ಮ ಕರ್ತವ್ಯ ನಾವು ಮಾಡ್ತಾ ಹೋಗ್ಬೇಕು. ಮಿಕ್ಕವರ ವಿಚಾರ ಬಿಟ್ಟುಬಿಡಬೇಕು. ಅಷ್ಟಕ್ಕೂ ನಾನು ಮಾಡ್ತಾ ಇರೋದು ನನ್ನ ಮೊಮ್ಮಗುವಿನ ಬಾಣಂತನ ತಾನೇ... ನನ್ನ ಬ್ಯಾಗ್ ರೆಡಿ ಮಾಡು. ಬಾಣಂತನಕ್ಕೆ ಬೇಕಾದ ಸಾಮಗ್ರಿಗಳನ್ನ ನಾನು ಇಟ್ಕೋತೀನಿ. ನಿನ್ನ ಅತ್ತಿಗೆಗೆ ಒಂದು ಒಳ್ಳೆ ಸೀರೆ ತೆಗಿ. ಮೊಮ್ಮಗೂಗೆ ನಮ್ಮ ಬಜೆಟ್‌ನಲ್ಲೇ ಚಿಕ್ಕ ಚಿನ್ನದ ಸರ ತೆಗಿ... ಸರೀನಾ" ಎಂದು ಹೇಳಿದೆ. ಅಚ್ಚರಿಯಿಂದ ನನ್ನತ್ತ ನೋಡಿದವನ ತಲೆ ತಡವಿ "ರಿಲ್ಯಾಕ್ಸ್... ನಾವು ನಿರೀಕ್ಷಿಸದೇ ಇರೋದು... ನಾವು ಮಾಡ್ಲೇಬೇಕಾಗಿರೋದು ಬದುಕಿನಲ್ಲಿ ತುಂಬಾ ಇರುತ್ತೆ. ಹಾಗೇ ಅಲ್ಲ... ತಿರುವುಗಳೊಂದಿಗೆ... ಕರ್ಮಣ್ಯೇ ವಾಧಿಕಾರಸ್ತೇ... ಅನ್ಕೊಂಡು ಹೋಗೋ ಲಾಜಿಕ್ಕೇ ಜೀವನದ ಸಿಂಪಲ್ ಫಿಲಾಸಫಿ" ಎಂದೆ. ಇಬ್ಬರ ಮುಖದಲ್ಲೂ ಮುಗುಳ್ನಗೆ ಮೂಡಿತ್ತು.


## ಮಧುರಾ ಕರ್ಣಮ್

ಲೇಖಕಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ ಬಿ.ಎಸ್ಸಿ, ಎಲ್‌ಎಲ್‌ಬಿ. ಕತೆ, ಹಾಸ್ಯಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...', 'ಆಕ್ರಮಣ' ಅವರ ಪ್ರಕಟಿತ ಕೃತಿಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.